ಟೈಮ್ ಮಷಿನ್ ಹಂತ 1
ಕಾರ್ಡ್ಸ್ - ಮುಂಭಾಗ







































ಟೈಮ್ ಮಷಿನ್ ಹಂತ 1
ಕಾರ್ಡ್ಸ್ - ಹಿಂಭಾಗ

**ಕಂಠಪಾಠ ವಚನ**

ಯಾಕೋಬನು 1:19
“ಸಹೋದರರೇ,
ಇದನ್ನು ನೆನಪಿನಲ್ಲಿಡಿ;
ನಿಮ್ಮಲ್ಲಿ ಪ್ರತಿಯೊಬ್ಬನು
ಆಲಿಸುವುದರಲ್ಲಿ ಚುರುಕಾಗಿ,
ಮಾತನಾಡುವುದರಲ್ಲಿ
ದುಡುಕದೆ,
ಸಿಟ್ಟುಗೊಳ್ಳುವುದರಲ್ಲಿ
ಸಾವಧಾನವಾಗಿ ಇರಲಿ.”

**ಕಂಠಪಾಠ ವಚನ**

ಎಫೆಸಿಯರಿಗೆ 4:32
“ಪರಸ್ಪರ ಕರುಣೆಯಿಂದಲೂ
ಕನಿಕರದಿಂದಲೂ
ವರ್ತಿಸಿರಿ. ಯೇಸುಕ್ರಿಸ್ತರಲ್ಲಿ
ದೇವರು ನಿಮ್ಮನ್ನು
ಕ್ಷಮಿಸಿದಂತೆಯೇ, ನೀವು
ಸಹ ಒಬ್ಬರನ್ನೊಬ್ಬರು
ಕ್ಷಮಿಸಿರಿ.”

**ಕಂಠಪಾಠ ವಚನ**

೨ ಕೊರಿಂಥಿಯರಿಗೆ 8:9
“ಪ್ರಭು ಯೇಸುಕ್ರಿಸ್ತರ
ಕೃಪಾಶಕ್ತಿಯನ್ನು ನೀವು
ಬಲ್ಲಿರಿ. ಅವರು ತಮ್ಮ
ಬಡತನದಿಂದ ನಿಮ್ಮನ್ನು
ಶ್ರೀಮಂತವಾಗಿಸಲೆಂದು,
ತಾವು ಶ್ರೀಮಂತರಾಗಿದ್ದರೂ
ನಿಮಗೋಸ್ಕರ
ಬಡವರಾದರು.”

**ಕಂಠಪಾಠ ವಚನ**

ಯಾಕೋಬನು 4:11
“ಸಹೋದರರೇ,
ಒಬ್ಬರನ್ನೊಬ್ಬರು ನಿಂದಿಸಬೇಡಿ.
ಯಾರಾದರೂ ತನ್ನ
ಸಹೋದರನನ್ನು ನಿಂದಿಸಿದರೆ
ಅಥವಾ ಖಂಡಿಸಿದರೆ,
ಅಂಥವನು ಧರ್ಮಶಾಸ್ತ್ರವನ್ನೇ
ನಿಂದಿಸಿ ಖಂಡಿಸುತ್ತಾನೆ. ನೀನು
ಧರ್ಮಶಾಸ್ತ್ರವನ್ನು ಖಂಡಿಸಿದರೆ,
ನ್ಯಾಯಾಧಿಪತಿ
ಎನಿಸಿಕೊಳ್ಳುವೆಯೇ ಹೊರತು
ನೀನು ಅದನ್ನು ಅನುಸರಿಸಿ
ನಡೆಯುವವನಾಗುವುದಿಲ್ಲ”

**ಕಂಠಪಾಠ ವಚನ**

೧ ಪೇತ್ರನು 2:9 “ನೀವು
ದೇವರು ಆಯ್ದುಕೊಂಡ
ಜನಾಂಗ, ರಾಜಯಾಜಕರು,
ಪವಿತ್ರ ಪ್ರಜೆ, ದೇವರ
ಸ್ವಕೀಯ ಜನ; ಅವರ
ಅದ್ಭುತ ಕಾರ್ಯಗಳನ್ನು
ಪ್ರಚುರಪಡಿಸುವುದಕ್ಕಾಗಿಯೇ
ಆಯ್ಕೆಯಾದವರು.
ಕಾರ್ಗತ್ತಲಿನಿಂದ ತಮ್ಮ
ಅದ್ಭುತಕರವಾದ ಬೆಳಕಿಗೆ
ನಿಮ್ಮನ್ನು ಕರೆತಂದವರು
ಅವರೇ. ”

**ಕಂಠಪಾಠ ವಚನ**

ಮತ್ತಾಯ 19:26
“ಯೇಸು ಅವರನ್ನು ನಿಟ್ಟಿಸಿ
ನೋಡುತ್ತಾ, “ಮನುಷ್ಯರಿಗಿದು
ಅಸಾಧ್ಯ; ಆದರೆ ದೇವರಿಗೆ
ಎಲ್ಲವೂ ಸಾಧ್ಯ,” ಎಂದರು”

**ಕಂಠಪಾಠ ವಚನ**

ಲೂಕ 10:27 ಅವನು, “ ‘ನಿನ್ನ
ಸರ್ವೇಶ್ವರನಾದ ದೇವರನ್ನು
ನಿನ್ನ ಪೂರ್ಣಹೃದಯದಿಂದಲೂ
ನಿನ್ನ ಪೂರ್ಣಆತ್ಮದಿಂದಲೂ
ನಿನ್ನ ಪೂರ್ಣಶಕ್ತಿಯಿಂದಲೂ
ನಿನ್ನ ಪೂರ್ಣ ಮನಸ್ಸಿನಿಂದಲೂ
ಪ್ರೀತಿಸು ಮತ್ತು ನಿನ್ನನ್ನು
ನೀನೇ ಪ್ರೀತಿಸಿಕೊಳ್ಳುವಂತೆ
ನಿನ್ನ ನೆರೆಯವನನ್ನೂ
ಪ್ರೀತಿಸು’ ಎಂದಿದೆ,” ಎಂದು
ಉತ್ತರಕೊಟ್ಟನು”

**ಕಂಠಪಾಠ ವಚನ**

ಲೂಕ 6:38 “ಪರರನ್ನು
ಕ್ಷಮಿಸಿರಿ, ದೇವರು ನಿಮ್ಮನ್ನೂ
ಕ್ಷಮಿಸುವರು; ಪರರಿಗೆ
ಕೊಡಿ, ದೇವರು ನಿಮಗೂ
ಕೊಡುವರು; ಅಳತೆಯಲ್ಲಿ
ತುಂಬಿ, ಕುಲುಕಿ, ಅದುಮಿ
ತುಳುಕುವಂತೆ ಅಳೆದು ನಿಮ್ಮ
ಮಡಿಲಿಗೆ ಹಾಕುವರು. ನೀವು
ಕೊಟ್ಟ ಅಳತೆಯಲ್ಲೇ ದೇವರು
ನಿಮಗೂ ಅಳೆದುಕೊಡುವರು,”
ಎಂದರು.”

**ಕಂಠಪಾಠ ವಚನ**

ಯೊವಾನ್ನ 8:12 “ಬಳಿಕ
ಯೇಸು ಸ್ವಾಮಿ ಜನರನ್ನು
ಮತ್ತೊಮ್ಮೆ ಕಂಡು
ಹೀಗೆಂದರು: “ನಾನೇ
ಜಗಜ್ಯೋತಿ, ನನ್ನನ್ನು
ಹಿಂಬಾಲಿಸುವವನು
ಕತ್ತಲಲ್ಲಿ ನಡೆಯುವುದಿಲ್ಲ.
ಜೀವದಾಯಕ ಜ್ಯೋತಿ
ಅವನಲ್ಲಿರುತ್ತದೆ.””

**ಕಂಠಪಾಠ ವಚನ**

ಹಿಬ್ರಿಯರಿಗೆ 13:17
“ನಿಮ್ಮ ಸಭಾನಾಯಕರಿಗೆ
ವಿಧೇಯರಾಗಿರಿ. ಅವರ
ಆಜ್ಞೆಗಳನ್ನು ಪಾಲಿಸಿರಿ.
ಅವರು ನಿಮ್ಮ ಆತ್ಮಗಳ
ಪಾಲಕರು; ದೇವರಿಗೆ
ಲೆಕ್ಕ ಒಪ್ಪಿಸಬೇಕಾದವರು.
ಈ ಸೇವೆಯನ್ನು ಅವರು
ಸಂತೋಷದಿಂದ ಮಾಡುವಂತೆ
ನೀವು ನಡೆದುಕೊಳ್ಳಿ. ಅವರು
ಮನನೊಂದುಕೊಂಡು
ಮಾಡುವ ಸೇವೆಯಿಂದ ನಿಮಗೆ
ಒಳಿತಾಗದು.”

**ಕಂಠಪಾಠ ವಚನ**

ಧರ್ಮೋಪದೇಶಕಾಂಡ
31:8 “ಸರ್ವೇಶ್ವರ ತಾವೇ
ನಿನ್ನ ಮುಂದುಗಡೆ
ಹೋಗುವರು; ಅವರೇ
ನಿನ್ನ ಸಂಗಡ ಇರುವರು;
ನಿನ್ನನ್ನು ಅಪಜಯಕ್ಕೆ
ಗುರಿಪಡಿಸುವುದೇ ಇಲ್ಲ,
ಕೈಬಿಡುವುದಿಲ್ಲ. ಅಂಜಬೇಡ;
ಧೈರ್ಯದಿಂದಿರು,” ಎಂದು
ಹೇಳಿದನು.”

**ಕಂಠಪಾಠ ವಚನ**

ಯೊವಾನ್ನ 3:16 “ದೇವರು
ಲೋಕವನ್ನು ಎಷ್ಟಾಗಿ
ಪ್ರೀತಿಸಿದರೆಂದರೆ ತಮ್ಮ
ಏಕೈಕ ಪುತ್ರನನ್ನೇ
ಧಾರೆಯೆರೆದರು;
ಆತನಲ್ಲಿ ವಿಶ್ವಾಸವಿಟ್ಟ
ಯಾರೂ ನಾಶವಾಗದೆ
ಎಲ್ಲರೂ ನಿತ್ಯಜೀವವನ್ನು
ಪಡೆಯಬೇಕೆಂಬುದೇ
ದೇವರ ಉದ್ದೇಶ”

**ಕಂಠಪಾಠ ವಚನ**

ಯೊವಾನ್ನ 11:25 “ಯೇಸು,
ಅವಳಿಗೆ, “ಪುನರುತ್ಥಾನವೂ
ಜೀವವೂ ನಾನೇ; ನನ್ನಲ್ಲಿ
ವಿಶ್ವಾಸವಿಟ್ಟವನು
ಸಾವಿಗೀಡಾದರೂ
ಜೀವಿಸುವನು”